ನೀರು ಸಂಗ್ರಹ ಮಾಡದೇ ಇರುವುದರಿಂದ ಏನು ತೊಂದರೆ ಆಗಿದೆ ಎಂಬುದನ್ನು ಹೇಳಬೇಕಾಗುತ್ತದೆ. ನಮ್ಮ ಊರಿನಲ್ಲಿ ಈ ಯೋಜನೆಯ ವ್ಯಾಪ್ತಿಗೆ ಬರುವ ಕಂಡವಾರದ ಕೆರೆ ಹಾಗೂ ಅಣಕಲೂರು ಕೆರೆಗಳು ಎಂದು ಹೇಳಿ ಎರಡು ದೊಡ್ಡ ಕೆರೆಗಳು ಇವೆ.

ಈ ಕೆರೆಯಲ್ಲಿ ನೀರು ನಿಂತರೆ ಮಾತ್ರ ಆ ಕೆರೆಗಳಲ್ಲಿ ನೀರು ಸಂಗ್ರಹಣೆ ಆಗುವುದಕ್ಕೆ ಅವಕಾಶ ಇದೆ. ಇಲ್ಲದಿದ್ದರೆ ನಮಗೆ ತೊಂದರೆಯಾಗುತ್ತದೆ. ಅಚ್ಚುಕಟ್ಟುದಾರರಿಗೂ ಕೂಡ ತೊಂದರೆ ಇರುವುದರಿಂದ ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ವರ್ಷ ಕೂಡ 1990-91ನೇ ಇಸವಿಗೆ ಸುಮಾರು 10 ಲಕ್ಷ ರೂಪಾಯಿ ನಿಗದಿಪಡಿಸಿದ್ದರು. ಅದರಲ್ಲಿ ಒಂದು ಬಿಡಿಗಾಸು 10 ಪೈಸೆಯನ್ನೂ ಕೂಡ ಖರ್ಚು ಮಾಡಲಿಲ್ಲ. ಈ ವರ್ಷ ಬಜೆಟ್‌ನಲ್ಲಿ ಸುಮಾರು 12 ಸಾವಿರ ರೂಪಾಯಿ ಒದಗಿಸಿದ್ದಾರೆ. 40 ಲಕ್ಷ ರೂಪಾಯಿನ ಅಂದಾಜು ವೆಚ್ಚಕ್ಕೆ 12 ಸಾವಿರ ರೂಪಾಯಿ ಯಾವ ಮೂಲೆಗೆ? ಏನು ಮಂತ್ರ ಹಾಕುವುದಕ್ಕೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಸದಸ್ಯರಿಯವರು ಯಾವ ಮೂಲಗಳಿಂದ ವಿಷಯ ತೆಗೆದುಕೊಂಡರೋ ಗೊತ್ತಿಲ್ಲ. ಆದರೆ ಈ ಮೂರು ಪ್ರಸ್ತಾವನೆಗಳನ್ನು ನಾವು ಪರಿಶೀಲನೆ ಮಾಡಿ ಯಾವುದು ಕಾರ್ಯಸಾಧ್ಯ ಎಂದು ಕಂಡುಬರುತ್ತದೋ ಆ ಕೆಲಸ ಪ್ರಾರಂಭ ಮಾಡಲು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಶ್ರೀಯುತ ಮಹದೇವ್ ಅವರೇ, ನಿಮ್ಮ ಪ್ರಶ್ನೆಗೆ ಇನ್ನೊಂದು ವಾರ ಟೈಮ್ ಕೇಳಿದ್ದಾರೆ.

ಶ್ರೀ ಎಂ. ಮಹದೇವ್ : ಅಸೆಂಬ್ಲಿ ಮುಗಿದ ಮೇಲೆ ಕೊಟ್ಟು ಬಿಡುತ್ತಾರಾ?

ಉಪಾಧ್ಯಕ್ಷರು : ಈಗ ತಡೆಹಿಡಿಯಲಾದ ಪ್ರಶ್ನೆಗಳು.

ಶ್ರೀ ಟಿ. ಬಿ. ಜಯಚಂದ್ರ ಸಭಾಧ್ಯಕ್ಷಣೆಯವರೇ, ಸನ್ಮಾನ್ಯ ವಿಜಯಕುಮಾರ್ ಅವರ ಪ್ರಶ್ನೆ..

ಉಪಾಧ್ಯಕ್ಷರು : ಇಲ್ಲ. ತಾವು ಕಳುಹಿಸಿದ್ದೀರೇ ಹೊರತು ವಿಜಯಕುಮಾರ್ ರವರು ನನಗೆ ಕಾಗದ ಕಳುಹಿಸಿಲ್ಲ. ಅವರ ಪತ್ರ ಬಂದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :ಇದು ಮುಖ್ಯವಾದಂಥ ಪ್ರಶ್ನೆಯಾಗಿರುವುದರಿಂದ ತಾವು ಅವಕಾಶ ಕೊಟ್ಟರೆ...

ಉಪಾಧ್ಯಕ್ಷರು : ಇಲ್ಲ. ಈಗ ತಡೆಹಿಡಿಯಲಾದ ಪ್ರಶ್ನೆಗಳು.

ದೊಡ್ಡಬಳ್ಳಾಪುರದಲ್ಲಿ ಅಪೂರ್ಣಗೊಂಡಿರುವ ಮನೆಗಳು.

2566-ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು? (ಗ್ರಾಮವಾರು ಅಂಕಿ ಅಂಶಗಳನ್ನು ಒದಗಿಸುವುದು).

ಆ) ಈ ಮನೆಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಹಣವೆಷ್ಟು?

ಇ) ಈ ಮನೆಗಳ ನಿರ್ಮಾಣಕ್ಕಾಗಿ 1990-91ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣವೆಷ್ಟು, ಹಾಗೂ ಇದರಲ್ಲಿ ಖರ್ಚಾದ ಹಣವೆಷ್ಟು?

ಈ) ಈ ಮನೆಗಳ ಮುಕ್ತಾಯಕ್ಕೆ ಇನ್ನೂ ಎಷ್ಟು ಕಾಲಾವಧಿ ಬೇಕಾಗುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ: 461. (ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಆ) ಅಗತ್ಯವಿರುವ ಹಣ ರೂ. 13,97,525

ಇ) 1) ಬಿಡುಗಡೆ ಮಾಡಲಾದ ಹಣ 5,11,726

2) ಖರ್ಚಾದ ಹಣ ರೂ. 5,11,726

ಈ) ಕರ್ನಾಟಕ ಗೃಹ ಮಂಡಳಿಯು ಸಾಲದ ಹಣವನ್ನು ಬಿಡುಗಡೆ ಮಾಡಿದನಂತರ ಮನೆಗಳನ್ನು ಪೂರ್ಣಗೊಳಿಸಲಾಗುವುದು.

ಹುಡ್ಕೋ ಜನತಾ ವಸಿತ ಯೋಜನೆಯಡಿ 1985-86ರಿಂದ 1990-91ರವರೆಗೆ ಅಪೂರ್ಣ ಮನೆಗಳ ಗ್ರಾಮವಾರು ಪಟ್ಟಿ ದೊಡ್ಡಬಳ್ಳಾಪುರ ತಾಲ್ಲೂಕು.

ಗ್ರಾಮದ ಹೆಸರು	*ಅಪೂರ್ಣ ಮನೆಗಳ ಸಂಖ್ಯೆ*
1. **ಸಿ.ಡಿ. ಅಗ್ರಹಾರ**	1
ಕೋಡಿಪಾಳ್ಯ	3
ಗೆಜ್ಜಗಜ ಹಳ್ಳಿ	2
ಪುದಗೊಂಡನಹಳ್ಳಿ	1
ಕೋಡಿಹಳ್ಳಿ	5
ದೊಡ್ಡ ತುಮಕೂರು	5
ಗೌಡಹಳ್ಳಿ	3
ಕಾಲನೂರು ಪಾಳ್ಯ	1
ಮಧುರೆ	1
ಕಾಡನೂರು	5
ಬೈರಸಂದ್ರ	5
2. **ತೂಬುಗೆರೆ**	
ಪೆರಮಗೊಂಡಹಳ್ಳಿ	1
ಕಾರನಾಳು	1
ವಡ್ಡರಹಳ್ಳಿ	4
ಪಾಲ್‌ಫಲ್ ದಿನ್ನೆ	1
ಗುಂಜೂರು	2

ಮೇಲಿನಾಯಕನಹಳ್ಳಿ	2
ಎಸ್. ನಾಗೇನಹಳ್ಳಿ	3
ಕೆಳಗಿನ ನಾಯಂಡರಹಳ್ಳಿ	1
ಹಿರೇಮುದ್ದೇನಹಳ್ಳಿ	2
ತೂಬಗೆರೆ	4
ಗೆದ್ದಲಪಾಳ್ಯ	2
ಕೆಳಗಿನ ಜೂಗಾನಹಳ್ಳಿ	2
ಎಸ್.ಎಸ್. ಘಾಟಿ	1
ಗಂಗಸಂದ್ರ	1
ತುರುವನಹಳ್ಳಿ	2
ಕಾಚಾಹಳ್ಳಿ	1
ಸೋಶೇನಹಳ್ಳಿ	1
ಕಂಟನಗುಂಟೆ	1
ಆಡೋನಹಳ್ಳಿ	1
ಲಗುಮೇನಹಳ್ಳಿ	1
ನೆಲಬಿದಿಗೆ	5
ಮೇಲಿನ ಜೋಗನಹಳ್ಳಿ	1
ದುರ್ಗೇನಹಳ್ಳಿ	1
3. ಮೆಳೇಕೋಟೆ	3
ಡೋಗೋಂಡಹಳ್ಳಿ	3
ಗಂಢರಾಜಪುರ	5
ಪೆಗ್ಗಡಿಹಳ್ಳಿ	6
ಮೆಳೇಕೋಟೆ	2
ಭೂಮೇನಹಳ್ಳಿ	1
ಮಾರಹಳ್ಳಿ	2
ಓರೇನಗುಡ್ಡದಹಳ್ಳಿ	2
ಗೂಳ್ಯ	1
ಚನ್ನಾಪುರ	2
ಮೆಳೇಕೋಟೆ ಕ್ರಾಸ್	5
ಗಂಟಿಗಾನಹಳ್ಳಿ	5
ನದಿಗುಂಡ	4
ಸಾದನಮಠ	3

ಚಿಕ್ಕರಾಯವ್ವನಹಳ್ಳಿ	3
ತ್ತುರುವೇಕೆರೆ	1
ಊದನಹಳ್ಳಿ	1
ಬೀಡಿಕೆರೆ ಅಗ್ರಹಾರ	1
ಬೇಡಿಕೆ ಕೆರೆ	1

4. ಕೋಡಿಗೇನಹಳ್ಳಿ

ಕೊಡಿಗೇನಹಳ್ಳಿ	8
ಹೊನ್ನಾಘಟ್ಟ	2
ಹಳ್ಳಾಲಸಂದ್ರ	3
ಕುರುಬರಹಳ್ಳಿ	1
ತಪಸೀಹಳ್ಳಿ	4
ತಗಳವಾದ	5
ಕಮಲೂರು	1
ನಾಗಸಂದ್ರ	3
ಮದಗೊಂಡನಹಳ್ಳಿ	1
ಅಂತರಹಳ್ಳಿ	1
ಕೋಲಾರ	3

5. ರಾಜಘಟ್ಟ

ಕೋಸಘಟ್ಟ	7
ಮಲ್ಲತಹಳ್ಳಿ	3
ಸಣ್ಣಪ್ಪನಹಳ್ಳಿ	3
ತಿಮ್ಮಸಂದ್ರ	2
ಅಂದರಹಳ್ಳಿ	2
ರಾಜಘಟ್ಟ	3
ಕೋಡಿಹಳ್ಳಿ	4
ಲಿಂಗನಹಳ್ಳಿ	5
ರಾಮಯ್ಯನಪಾಳ್ಯ	1
ಮೋಪರಹಳ್ಳಿ	1
ತೊಗರಿಘಟ್ಟ	1
ಕೆಂಪಗನಾಳ	1
ಪಂಡಕೂಗುತಿಮ್ಮಪಳ್ಳಿ	1

6.	**ಕನಸವಾಡಿ**	
	ಸಿಂಪಾಡಿಪುರ	2
	ಸೌಕಲದೇವಿಪುರ	2
	ಮಾರಸಂದ್ರ	2
	ಕಲ್ಲೋಡು	1
	ಇಸ್ತೂರುಪಾಳ್ಯ	1
	ಗಂಡರೋಳಿಮಠ	1
	ಹಾಲೇನಹಳ್ಳಿ	2
	ಕನಸವಾಡಿ	2
	ದೊಡ್ಡಕ್ಯನಹಳ್ಳಿ	3
	ಪುಟ್ಟೇನಅಗ್ರಹಾರ	6
	ಕನ್ನಮಂಗಲ	2
	ತಿಮ್ಮಸಂದ್ರ	3
	ಹೊನ್ನವರ	1
7.	**ಸಕ್ಕರಗೊಲ್ಲಹಳ್ಳಿ**	
	ಕಾವೇರಿ ಅಗ್ರಹಾರ	9
	ಸಕ್ಕರಗೊಲ್ಲಹಳ್ಳಿ	4
	ಹುಲಿಕುಂಟೆ	3
	ಚಿಕ್ಕಮಂಡಕನಾಳ	7
	ಬೂಚನಹಳ್ಳಿ	7
	ಕಾಡತಿಪ್ಪೂರು	3
	ಮೂಡಲಕಾಡೇನಹಳ್ಳಿ	3
	ಮುತ್ತುಗದಹಳ್ಳಿ	1
8.	**ಸಾಸಲು**	
	ಲಿಂಗಬೀರನಹಳ್ಳಿ	3
	ದಡಕಟ್ಟಮಡು	1
	ಶ್ರೀರಾಮನಹಳ್ಳಿ	2
	ಮಲ್ಲೇಗೌಡನಹಳ್ಳಿ	2
	ಮುತ್ತುಗದಕಟ್ಟೆಪಾಳ್ಯ	2
	ಜ್ಯೋತಿಪುರ	1
	ಲಕ್ಕೇನಹಳ್ಳಿ	1
	ಬೋವಿಪಾಳ್ಯ	3

ಸಾಸಲು	1
ಹಣಚಿಹಟ್ಟಿ	1
ಸಿಂಗೇನಹಳ್ಳಿ	5
ನಾಗಲಾಪುರ	1
ಬಾಚಾರಲಹಳ್ಳಿ	3
ಕಾದಲ್ಲಪ್ಪನಹಳ್ಳಿ	1
ಗುಂಡಲ್ಪನಾಯಕನಹಳ್ಳಿ	2

9. **ಹೊಸಹಳ್ಳಿ**

ಹೊಸಕೋಟೆ	1
ಪೂಜೇನಹಳ್ಳಿ	2
ಹೊಸಹಳ್ಳಿ	7
ಆರೋಡಿ	4
ಬಂಕೇನಹಳ್ಳಿ	1
ಮಾಕಳಿ	2
ಗುಂಡಂಗೆರೆ	5
ಮಲ್ಲಸಂದ್ರ	6
ಉಜ್ಜನಿ	2
ವಡ್ಡನಹಳ್ಳಿ	4

10. **ಹಣಚೆ**

ಶ್ರವಣೂರು	2
ಮಂಡಿಬ್ಯಾಡರಹಳ್ಳಿ	4
ಮಾಡೇಶ್ವರ	2
ನೇರಳಘಟ್ಟ	3
ಮಜರಾಹೊಸಹಳ್ಳಿತಾಂಡ	2
ತಿಪ್ಪೂರು	1
ನೆಲ್ಲುಕುಂಟೆ	1
ಕೂಗಾನಹಳ್ಳಿ	1
ಕಲ್ಲುದೇವನಹಳ್ಳಿ	2
ಕೆಸ್ತೂರು	1
ಚಿಕ್ಕನಹಳ್ಳಿ	3
ಮುಸಕ್ಯಾರು	2

ಶಿರವಾರ	2
ನಾಗಶೆಟ್ಟಿಹಳ್ಳಿ	1
ಶ್ರೀನಿವಾಸಪುರ	1

11. ದೊಡ್ಡ ಬೆಳವಂಗಲ

ಹಾದ್ರಿಪುರ	7
ದೊಡ್ಡಬೆಳವಂಗಲ	5
ಕತ್ತಿಹೊಸಹಳ್ಳಿ	2
ತರಬಳಹಳ್ಳಿ	2
ಅಂಬಲಗೆರೆ	1
ಅಯ್ಯನಹಳ್ಳಿ	1
ವಡ್ಡರಪಾಳ್ಯ	5
ಸಾರನಹಳ್ಳಿ	3
ರಾಂಪುರ	1
ಮದುರನಹೊಸಹಳ್ಳಿ	2
ಚುಂಚೇಗೌಡನಹೊಸಹಳ್ಳಿ	3

12. ಮಜರಾಹೊಸಹಳ್ಳಿ

ಆಲಹಳ್ಳಿ	3
ಚಿಕ್ಕಸಂದ್ರ	1
ವರದನಹಳ್ಳಿ	1
ವಿಕಾಶೀಪುರ	5
ವರ್ಗಾಜೋಗಿಹಳ್ಳಿ	4
ಕಾನೇಹೊಸಹಳ್ಳಿ	2
ಓಲದೇವನಹಳ್ಳಿ	1
ವೀರಾಪುರ	3
ಕರಿಯನಹಳ್ಳಿ	1
ತಿಪ್ಪಾಪುರ	2
ಅರೆಹಳ್ಳಿಗುಡ್ಡದಹಳ್ಳಿ	2
ಮಜರಾಹೊಸಹಳ್ಳಿ	2

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಮಂತ್ರಿಗಳು ಉತ್ತರದಲ್ಲಿ ಇನ್ನೂ ಲಕ್ಷ 11 ಸಾವಿರ ರೂಪಾಯಿ ಬಿಡುಗಡೆ ಆಗಬೇಕೆಂದು ಹೇಳಿದ್ದಾರೆ. ಆದಷ್ಟು ಬೇಗ

ತಾವು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಏಕೆಂದರೆ 461 ಮನೆಗಳು ಅಪೂರ್ಣವಾಗಿದೆ. ಬಹಳ ಮನೆಗಳಿಲ್ಲಾ ಈಗಾಗಲೇ ಬಿದ್ದುಹೋಗಿವೆ. ಎರಡನೆಯದಾಗಿ ಸರ್ಕಾರದ ಕಷ್ಟ ನಮಗೂ ಅರ್ಥವಾಗುತ್ತದೆ. ಏನೆಂದರೆ ಹುಡ್ಕೋದಿಂದ ಇನ್ನೂ ಹಣ ರಿಲೀಸ್ ಆಗಿಲ್ಲ. ಇದರಿಂದಾಗಿ ನಿಮಗೆ ಹಣ ಕೊಡುವುದಕ್ಕೆ ಬರುತ್ತಿಲ್ಲ. ನಾನು ಒಂದು ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಈ ಹಣ ಯಾವಾಗಲೂ ಹರಿಜನ ಬಂಧುಗಳಿಂದ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲದ ಕೆಲಸ ಇದು. ಎಲ್ಲಿಯವರೆಗೆ ನೀವು ವಸೂಲು ಮಾಡುವುದಿಲ್ಲ ಅಲ್ಲಿಯವರೆಗೆ ನೀವು ಫರ್ದರ್ ಅಸಿಸ್ಟೆನ್ಸ್ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಸರ್ಕಾರವೇ ಇದನ್ನು ಭರಿಸಿ ಅವರದು ವಜಾ ಮಾಡಿ ಸರ್ಕಾರ ಏನು ಹುಡ್ಕೋಗೆ ಹಣ ಕೊಡಬೇಕು ಆ ಹಣ ಕೊಟ್ಟು ಮುಂದೆ ಹೆಚ್ಚು ಹೆಚ್ಚು ಹಣ ಬರುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂಬುದು ನನ್ನ ಪ್ರಶ್ನೆ.

ಶ್ರೀ ಕೆ.ಹೆಚ್. ಪಾಟೀಲ್ : ನನ್ನವ್ವಕ್ಕೇ ಬಿಟ್ಟರೆ ನಿಮಗಿಂತ ಹೆಚ್ಚು ಸುದೀರ್ಘವಾಗಿ ನಾನು ಮಾಡಬಲ್ಲೆ. ಆದರೆ ಅದಕ್ಕೆ ಎಲ್ಲ ರೀತಿಯಿಂದ ಒಪ್ಪಿಗೆ ಸಿಗುವುದಿಲ್ಲ. ಈಗಿರುವ ಸ್ಥಿತಿಯಲ್ಲಿ ಹೇಳಬೇಕು ಎಂದರೆ ಒಟ್ಟು ನಮಗೆ ಕೊಡಬೇಕಾಗಿರುವುದು 17,97,525 ರೂಪಾಯಿಗಳು. ಅದರ ಪೈಕಿ ಈಗಾಗಲೇ ರಿಲೀಸ್ ಮಾಡಿರುವುದು 5 ಲಕ್ಷ 11 ಸಾವಿರದ 726 ರೂಪಾಯಿಗಳು. ಆದಷ್ಟೂ ಖರ್ಚಾಗಿದೆ. ಉಳಿದ ಹಣ ಖರ್ಚು ಮಾಡುವ ಸಲುವಾಗಿ ಹೌಸಿಂಗ್ ಬೋರ್ಡಿಗೆ ಬರೆದಿದ್ದೇವೆ. ಹೌಸಿಂಗ್ ಬೋರ್ಡಿನಿಂದ ಅಮೌಂಟ್ ರಿಲೀಸ್ ಆದಕೂಡಲೇ ಉಳಿದ ಹಣ ರಿಲೀಸ್ ಮಾಡಿ ಎಲ್ಲ ದುರಸ್ತಿ ಮಾಡುತ್ತಾರೆ. ನಿಮ್ಮ ಸಲಹೆ ಸರಿ ಇದೆ. ಅದು ನಾನು ಒಪ್ಪುತ್ತೇನೆ. ಆದರೆ ಸಲಹೆ ಪ್ರಕಾರ ಮಾಡಬೇಕಾದರೆ ಹೊಸದಾಗಿ ಕಟ್ಟುವಂಥ ಮನೆಗಳಾಗಲೀ ಅಥವಾ ಕಟ್ಟಿಸುತ್ತೇನೆ. ಎಂದು ನಾವು ಅನೌನ್ಸ್ ಮಾಡಿರುವ ಮನೆಗಳಾಗಲೀ ಸ್ವಲ್ಪ ದಿವಸ ಸ್ಥಗಿತಗೊಳಿಸಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷಿಣಿಯವರೇ, ಬಹಳಷ್ಟು ಆಶ್ವಾಸನೆಗಳನ್ನು ಸರ್ಕಾರ ಕೊಟ್ಟಿದೆ. ನಿನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಬರುವ ಮಾರ್ಚ್‌ನೊಳಗೆ ಎರಡು ಲಕ್ಷ ಮನೆಗಳನ್ನು ಕಟ್ಟಿಸಿಬಿಡುತ್ತೇವೆ ಎಂದು ಹೇಳಿದ್ದಾರೆ ಡಿಮ್ಯಾಂಡ್ ಮೇಲೆ ಮಾತನಾಡುವಾಗ ನಾನು ಮಾತನಾಡುತ್ತೇನೆ. ಈ ಆಶ್ವಾಸನೆ ಕೊಡುವುದಕ್ಕೆ ಮೊದಲು ಎರಡು ಲಕ್ಷ ಮನೆ ಕಟ್ಟುವುದಕ್ಕೆ ಮೊದಲು ಬಿದ್ದುಹೋಗುತ್ತಿರುವ ಮನೆಗಳನ್ನಾದರೂ ಕಂಪ್ಲೀಟ್ ಮಾಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್ : ಈ ಮನೆಯನ್ನು ಕಟ್ಟಿಸಬೇಕು ಮುಂದಿನ ಮನೆಯನ್ನು ಕಟ್ಟಿಸಬೇಕು. ಇದೆಲ್ಲಾ ಮುಂದೆ ಬರತಕ್ಕ ಹಣದ ವ್ಯವಸ್ಥೆ ನೋಡಿಕೊಂಡು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು : ಶ್ರೀಯುತ ರವೀಂದ್ರನಾಥ ಬಾಬು ಅವರೇ, ಈ ಪ್ರಶ್ನೆಗೆ ಟೈಮ್ ಕೇಳಿದ್ದಾರೆ. ಮುಂದೆ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಕೆರೆಗಳ ತೂಬು ಮತ್ತು ಕಾಲುವೆಗಳ ದುರಸ್ತಿ ಬಗ್ಗೆ.

2736-ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ಆಶ್ರಯದಲ್ಲಿ ಬರುವ ಕಾಲುವೆ, ತೂಬು ದುರಸ್ತಿ ಕೆಲಸಗಳು